ರಾಷ್ಟ್ರೀಯ ಸ್ವಾಸ್ಥ ಭೀಮಾ ಯೋಜನೆ

19 (242) ಶ್ರೀ ಯು. ಟಿ. ಖಾದರ್ (ಮಂಗಳೂರು):– ಮಾನ್ಯ ಕಾರ್ಮಿಕ ಮತ್ತು ರೇಷ್ಮೆ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ರಾಷ್ಟ್ರೀಯ ಸ್ವಾಸ್ಥ್ಯ ಭೀಮಾ ಯೋಜನೆಯನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಾರಿಗೊಳಿಸಲಾಗಿದೆಯೇ;

ಆ) ಈ ಯೋಜನೆಯ ರೂಪು ರೇಷೆಗಳೇನು (ವಿವರ ಒದಗಿಸುವುದು);

ಇ) ಈ ಯೋಜನೆಯ ಕೇಂದ್ರ ಸರ್ಕಾರದಿಂದ ಅನುದಾನ ನೀಡಲಾಗುತ್ತಿದೆಯೇ;

ಈ) ಈ ಯೋಜನೆಗೆ ರಾಜ್ಯ ಸರ್ಕಾರ ನೀಡುತ್ತಿರುವ ಹಣವೆಷ್ಟು (ವಿವರ ಒದಗಿಸುವುದು)?

ಶ್ರೀ ಬಿ. ಎನ್. ಬಚ್ಚೇಗೌಡ (ಕಾರ್ಮಿಕ ಮತ್ತು ರೇಷ್ಮೆ ಸಚಿವರು):–

ಅ) ಹೌದು

ಆ) ಆರ್‌ಎಸ್‌ಬಿವೈ ಯೋಜನೆ ಕೇಂದ್ರ ಸರ್ಕಾರವು ಬಡ, ಅಸಂಘಟಿತ ಕಾರ್ಮಿಕರು ಹಾಗೂ ಕೆಲವು ಆಯ್ದ ವೃತ್ತಿನಿರತ ಕಾರ್ಮಿಕರ ಆರೋಗ್ಯ ರಕ್ಷಣೆಗಾಗಿ ಜಾರಿಗೆ ತಂದಿರುವ ಆರೋಗ್ಯ ವಿಮಾ ಯೋಜನೆಯಾಗಿರುತ್ತದೆ.

♦ ಫಲಾನುಭವಿ ಕುಟುಂಬದ 5 ಜನರಿಗೆ ವಾರ್ಷಿಕವಾಗಿ ರೂ. 30,000/– ರವರೆಗೆ ಆರೋಗ್ಯ ವಿಮಾ ಸೌಲಭ್ಯ ದೊರಕಲಿದೆ.

♦ ಫಲಾನುಭವಿಗೆ 1085ಕ್ಕೂ ಹೆಚ್ಚಿನ ಕಾಯಿಲೆಗಳಿಗೆ ನಗದು ರಹಿತವಾಗಿ ಒಳರೋಗಿಯಾಗಿ ರಾಷ್ಟ್ರಾದ್ಯಾಂತ ಗುರುತಿಸಲ್ಪಟ್ಟ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸೆ ಸೌಲಭ್ಯ ಪಡೆಯಬಹುದು.

♦ ನವಜಾತ ಶಿಶುಗಳ ಆರೈಕೆ ಸೇರಿದಂತೆ ಉಚಿತ ಹೆರಿಗೆ ಸೌಲಭ್ಯ

♦ ವಾರ್ಷಿಕವಾಗಿ 1000 ರೂ. ಮೀರದಂತೆ ಪ್ರತಿ ಬಾರಿ ಫಲಾನುಭವಿ ಆಸ್ಪತ್ರೆಯಿಂದ ಚಿಕಿತ್ಸೆ ಪಡೆದು ಬಿಡುಗಡೆಯಾಗುವಾಗ ರೂ. 100/– ಸಾರಿಗೆ ಭತ್ಯೆ ಪಡೆಯಲು ಅರ್ಹ.

*ಒಂದು ಕುಟುಂಬದ ಸದಸ್ಯರು ಬೇರೆ ಬೇರೆ ಕಡೆ ವಾಸವಾಗಿದ್ದಲ್ಲಿ ಹೆಚ್ಚುವರಿಯಾಗಿ

ಸ್ಮಾರ್ಟ್ ಕಾರ್ಡ್–ಸ್ಲಿಟ್ ಕಾರ್ಡ್ ನೀಡುವ ಸೌಲಭ್ಯ ಲಭ್ಯ.

*ಫಲಾನುಭವಿ ಕುಟುಂಬದವರು ರೂ. 30/– ಪಾವತಿಸಿ ಸ್ಮಾರ್ಟ್ ಕಾರ್ಡ್ ಪಡೆಯಬೇಕಾಗುತ್ತದೆ.

ಇ) ಹೌದು, ಕೇಂದ್ರ ಸರ್ಕಾರವು ವಿಮಾ ಕಂಪನಿಗಳಿಗೆ ಪಾವತಿಸುವ ಪ್ರೀಮಿಯಂ ದರದ ಶೇಕಡ 75 ರಷ್ಟು ಅನುದಾನ ನೀಡುತ್ತದೆ.

ಈ) ಈ ಯೋಜನೆಗೆ ರಾಜ್ಯ ಸರ್ಕಾರವು 2011–12ನೇ ಸಾಲಿನ ಆಯವ್ಯಯದಲ್ಲಿ ಪ್ರೀಮಿಯಂನ ತನ್ನ ಪಾಲಿನ ಶೇಕಡ 25ರಷ್ಟು ಮೊತ್ತ ನೀಡುವ ಸಲುವಾಗಿ ರೂ.. 4,800 ಲಕ್ಷ ಮೊತ್ತವನ್ನು ಕಾಯ್ದಿರಿಸಿದೆ.

ಕನ್ನಡ ರಾಜ್ಯೋತ್ಸವ ಪ್ರಶಸ್ತಿ

20 (243) ಶ್ರೀ ಯು. ಟಿ. ಖಾದರ್ (ಮಂಗಳೂರು):– ಮಾನ್ಯ ಸಣ್ಣ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಕನ್ನಡ ರಾಜ್ಯೋತ್ಸವ ಪ್ರಶಸ್ತಿಯಿಂದ ರಾಷ್ಟ್ರ ಪ್ರಶಸ್ತಿ ಪಡೆದ ಮಹನೀಯರುಗಳು ವಂಚಿತರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ರಾಜ್ಯೋತ್ಸವ ಪ್ರಶಸ್ತಿ ಪಡೆಯಲು ಅರ್ಹರು ಖುದ್ದು ಸರ್ಕಾರಕ್ಕೆ ಅರ್ಜಿ ಸಲ್ಲಿಸುವುದು ಕಡ್ಡಾಯವೇ;

ಇ) ಅರ್ಹರಾದವರು ಅರ್ಜಿ ಸಲ್ಲಿಸಿದ್ದಲ್ಲಿ ಅವರುಗಳಿಗೆ ಪ್ರಶಸ್ತಿ ದೊರಕಿಸಿಕೊಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):–

ಅ) ಇಲ್ಲ.

ಆ) ಇಲ್ಲ

ಇ) ಹೌದು